**37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು**

**ಸಿ.ಸಿ. ನಂ. 14435/2016**

**ಪ್ರಾ.ಸಃ 1**

| | |
|---|---|
| **ಸಾಕ್ಷಿದಾರರ ಹೆಸರು** | ಶ್ರೀನಿವಾಸ್ ಎಸ್ |
| **ತಂದೆಯ ಹೆಸರು** | ಸಿದ್ದೇಗೌಡ |
| **ವಯಸ್ಸು** | 44 ವರ್ಷ |
| **ಉದ್ಯೋಗ** | ಮುಖ್ಯ ಪೇದೆ, ತಿಲಕ್ ನಗರ ಪೊ.ಠಾಣೆ |
| **ವಿಳಾಸ** | ಬೆಂಗಳೂರು. |
| **ಪ್ರ. ವ. ಬೋ ದಿನಾಂಕ** | 29/12/2023 |

**<u>ದಂ. ಪ್ರ. ಸಂ. ಕಲಂ 299 ರಡಿಯಲ್ಲಿ ಸಾಕ್ಷಿಯ ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ</u>**

ನಾನು 2022 ರಿಂದ ಇಲ್ಲಿಯವರೆಗೆ ತಿಲಕ್ ನಗರ ಪೊ.ಠಾಣೆಯಲ್ಲಿ HC ಯಾಗಿ ಕೆಲಸ ನಿರ್ವಹಿಸಿದ್ದು, ಈ ಪ್ರಕರಣದಲ್ಲಿ 2 ನೇ ಆರೋಪಿತನು ನ್ಯಾಯಲಯಕ್ಕೆ ಹಾಜರಾಗದೆ ತಲೆ ಮರೆಸಿಕೊಂಡಿದ್ದು ಸದರಿ ಆರೋಪಿತನ ವಿರುದ್ದ ನ್ಯಾಯಲಯದಿಂದ ಪ್ರೋಕ್ಲಮೇಷನ್ ಆದೇಶ ಹೊರಡಿಸಿದ್ದು, ನನ್ನನ್ನು ಪ್ರೋಕ್ಲಮೇಷನ್ ಕರ್ತವ್ಯಕ್ಕೆ ನೇಮಕ ಮಾಡಿದ್ದು ಅದರಂತೆ ನಾನು ದಿ. 16/09/2023 ರಂದು ಸದರಿ ಆರೋಪಿತನ ವಿಳಾಸಕ್ಕೆ ಹೋಗಿ ವಿಚಾರ ಮಾಡಲಾಗಿ, ಆರೋಪಿತನು ಪತ್ತೆಯಾಗಿರುವುದಿಲ್ಲ. ಆದ್ದರಿಂದ ಸದರಿ ಆರೋಪಿತನು ಎಲ್ಲಿಯಾದರೂ ಕಂಡುಬಂದಲ್ಲಿ ಆತನ ಬಗ್ಗೆ ಮಾಹಿತಿಯನ್ನು ಹತ್ತಿರದ ಪೊಲೀಸರಿಗೆ ತಿಳಿಸುವಂತೆ ಸಾರ್ವಜನಿಕರನ್ನು ಉದ್ದೇಶಿಸಿ ಟಾಂಟಾಂ ಹೊಡೆಸಿ, ಸಾರ್ವಜನಿಕ ಸ್ಥಳದಲ್ಲಿ ಜನರಿಗೆ ಕಾಣುವ ಹಾಗೆ ಆದೇಶದ ಪ್ರತಿಯನ್ನು ಅಂಟಿಸಿರುತ್ತೇನೆ. ಈ ಬಗ್ಗೆ ಸದರಿ ಸ್ಥಳದಲ್ಲಿ ಪಂಚನಾಮೆಗಳನ್ನು ಮಾಡಿರುತ್ತೇನೆ. ಈಗ ಪಂಚನಾಮೆಗಳನ್ನು ನೋಡುತ್ತಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಮೇಲ್ಕಂಡ ಎರಡನೇ ಆರೋಪಿತನ ಹೆಸರಿನಲ್ಲಿ ಯಾವುದೇ ಸ್ಥಿರ ಆಸ್ತಿ ಮತ್ತು ಚರ ಆಸ್ತಿಗಳು ಇದೆಯೇ ಎಂಬ ಬಗ್ಗೆ ತಿಳಿಸುವಂತೆ ಸ್ಥಳೀಯರನ್ನು ವಿಚಾರಿಸಲಾಗಿ ಆತನ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ಮಾಹಿತಿ ಬಂದಿದ್ದು ಅದನ್ನು ನಿಪಿ.1 ರಲ್ಲಿ ನಮೂದು ಮಾಡಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

**ಓ.ಹೇ. ಕೇ. ಸ. ಇ. ಒ**

**37 ನೇ ಅ.ಮು. ಮ. ದಂ. ನ್ಯಾ.**